# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 174-ಹೆಚ್.ಎಸ್.ಆರ್ ಬಡಾವಣೆ,

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಮುಖ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020-21 ದಿನಾಂಕ: 22/09/2021 & 19.01.2022 ಹಾಗೂ ನೋಡಲ್ ಅಧಿಕಾರಿ/ಜಂಟಿ ಆಯುಕ್ತರು (ಮಹದೇವಪುರ) ರವರು ದಿನಾಂಕ: 05.03.2022 ರಂದು ಬೆಳಿಗ್ಗೆ 10.00 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.174 ಹೆಚ್.ಎಸ್.ಆರ್ ಕಛೇರಿಯಲ್ಲಿ ವಾರ್ಡ್ ಸಮಿತಿ ಸಭೆಯನ್ನು 9ನೇ ಮುಖ್ಯ ರಸ್ತೆ, 14ನೇ ಅಡ್ಡ ರಸ್ತೆ, ಸೆಕ್ಟರ್-6, ಹೆಚ್.ಎಸ್.ಆರ್ ಬಡಾವಣೆ, ಬೆಂಗಳೂರು-560102 ರ ವಾರ್ಡ್ ನಂ.174 ಹೆಚ್.ಎಸ್.ಆರ್ ಉಪವಿಭಾಗ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

**ಹಾಜರಿದ್ದ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ, ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ ಆರ್. ವೆಂಕಟಚಲಪತಿ ಕ.ಆ.ಸೇ, | ನೋಡಲ್ ಅಧಿಕಾರಿ ವಾ.ನಂ.174 ಹಾಗೂ ಜಂಟಿ ಆಯುಕ್ತರು (ಮಹದೇವಪುರ) ವಲಯ | 9513322144 |
| 2 | ಶ್ರೀ ರಾಮೇಗೌಡ.ಕೆ.ಎಸ್ | ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು ವಾರ್ಡ್ ಸಂ.174 | 9480688174 |
| 3 | ಶ್ರೀ ಬಿ.ಎನ್.ಆರ್ ರೆಡ್ಡಿ | ಸದಸ್ಯರು | 9989000017 |
| 4 | ಶ್ರೀ ಹೆಚ್.ಇ. ಚಂದ್ರಶೇಖರ | ಸದಸ್ಯರು | 9880987339 |
| 5 | ಶ್ರೀ ರಾಮಚಂದ್ರ | ಸದಸ್ಯರು | 9845056649 |
| 6 | ಶ್ರೀಮತಿ ಡಾ॥ ಶಾಂತಿ, | ಸದ್ಯಸರು | 9036047199 |
| 7 | ಶ್ರೀ ಧೀನ್ ದಯಾಲ್ | ಕ್ಷೇಮಾಭಿವೃದ್ಧಿ ಸಂಘ | 9742436676 |
| 8 | ಶ್ರೀ ಬಿ. ಗೋವಿಂದ ಸ್ವಾಮಿ | 1ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ | 9341960547 |
| 9 | ಶ್ರೀ ಎನ್ ಗೋಪಾಲಾ ಕೃಷ್ಣ | 1ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ | 9449571949 |
| 10 | ಶ್ರೀ ರವಿಚಂದ್ರರಾವ್ | ಕ್ಷೇಮಾಭಿವೃದ್ಧಿ ಸಂಘ | 9844167069 |
| 11 | ಶ್ರೀಮತಿ ಎ ಆರತಿ | 1ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ | 9341960547 |
| 12 | ಶ್ರೀಮತಿ ಜಯಲಕ್ಷ್ಮೀ | ಕ್ಷೇಮಾಭಿವೃದ್ಧಿ ಸಂಘ | 9886024656 |
| 13 | ಶ್ರೀಮತಿ ಲಲಿತಾಂಬ | ಕ್ಷೇಮಾಭಿವೃದ್ಧಿ ಸಂಘ | 9448063776 |
| 14 | ಶ್ರೀ ಸಿ.ಎಸ್. ದೇಶಮುಖ | 6ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ | 9448029178 |
| 15 | ಶ್ರೀ ಜಿ ಚಂದ್ರಶೇಖರ್ | 6ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ | 9845382217 |

(2.....)

Scanned with

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 16 | ಕೆ ಶ್ರೀನಿವಾಸನ್ | ಕ್ಷೇಮಾಭಿವೃದ್ಧಿ ಸಂಘ | 9500040753 |
| 17 | ಸಂತೋಷ ಎಸ್ | ಮಂತ್ರಿ ಸರೋವರ, ಇಬ್ಬಲೂರು ಗ್ರಾಮ | 9845204675 |
| 18 | ಬಿನೋಜ್ ಜೆ.ಎಸ್ | ಮಂತ್ರಿ ಸರೋವರ, ಇಬ್ಬಲೂರು ಗ್ರಾಮ | 9620022232 |
| 16 | ಶ್ರೀ ಕೆ.ವಿ.ಪ್ರಕಾಶ್ | ಸ.ಕಾ..ಅ ಬೆಸ್ಕಾಂ | 9480797782 |
| 17 | ಶ್ರೀ ಸಾಯಿಬಣ್ಣ | ಸ.ಕಾ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ | 9845444039 |
| 18 | ಶ್ರೀ ಹನುಮಂತರಾಯ.ಟಿ | ಸ.ಕಾ.ಅ. (ಹೆಚ್.ಎಸ್.ಆರ್ ಉಪವಿಭಾಗ) & ಎಸ್.ಡಬ್ಲ್ಯೂ.ಡಿ | 9480688256 |
| 19 | ಶ್ರೀ ಟಿ ಅಶೋಕ್ ಕುಮಾರ್ | ಪೋಲಿಸ್ ಇನ್ಸ್‌ಪೆಕ್ಟರ್ ಸಂಚಾರಿ ಇಬ್ಬಲೂರು ಪೋಲಿಸ್ ಠಾಣೆ | 9480801426 |
| 20 | ಶ್ರೀ ಚಂದ್ರಶೇಖರ | ತೋಟಗಾರಿಕೆ ಅಧೀಕ್ಷಕರು | 9845014293 |
| 21 | ಎಸ್ ಸುಧೀರ್ | ಪಶುಸಂಗೋಪಾನೆ ಇಲಾಖೆ | 9845226800 |
| 22 | ಶ್ರೀ ಯತೀಶ್.ಎಂ.ಎಚ್ | ಸಹಾಯಕ ಅಭಿಯಂತರರು, ಬೆಸ್ಕಾಂ ಎಸ್-20 ಉಪವಿಭಾಗ | 9449840476 |
| 23 | ಶ್ರೀಮತಿ ಸತ್ಯವಾಣಿ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ 174 | 8971434331 |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಇಂದಿನ ಸಭೆಯಲ್ಲಿ ಚರ್ಚಿಸಿದರು. ಸಭೆಯಲ್ಲಿ ಕ್ಷೇಮಾಭಿವೃದ್ಧಿ ಸಂಘ ಮತ್ತು ಸಾರ್ವಜನಿಕರ ಕುಂದುಕೊರತೆ & ದೂರುಗಳನ್ನು ಸಂಬಂಧಪಟ್ಟ ಇಲಾಖೆಗೆ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಕ್ರಮ ಕೈಗೊಳುವಂತೆ ಸೂಚಿಸಿದರು ಹಾಗೂ ವಿವಿಧ ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರು ಸಭೆಗೆ ಗೈರು ಹಾಜರಾಗಿರುವ ಬಗ್ಗೆ ಸದಸ್ಯರು ಆಕ್ಷೇಪಿಸುತ್ತಾ, ನೋಡಲ್ ಅಧಿಕಾರಿಗಳು ಸಭೆಯನ್ನು ಪ್ರಾರಂಭಿಸಿದರು.

- **ತೋಟಗಾರಿಕೆ ಇಲಾಖೆ:-**

1. ಹೆಚ್.ಎಸ್.ಆರ್ ಬಡಾವಣೆ ವ್ಯಾಪ್ತಿಯ 17ನೇ ಅಡ್ಡ ರಸ್ತೆ, ಸೆಕ್ಟರ್-6 ರ ಉದ್ಯಾನವನದ ಒಳಭಾಗದಲ್ಲಿ ಓಡಾಡಲು ರಸ್ತೆ ನಿರ್ಮಿಸಲು ಹಾಗೂ ನವೀಕರಿಸುವಿಕೆ ಬಗ್ಗೆ ಸದ್ಯಸರು, ಕ್ಷೇಮಾಭಿವೃದ್ಧಿ ಸಂಘ & ಸಾರ್ವಜನಿಕರು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಶ್ರೀ ಚಂದ್ರಶೇಖರ ತೋಟಗಾರಿಕೆ ಅಧೀಕ್ಷಕರು ರವರು ಸ್ಥಳ ಪರಿಶೀಲಿಸಿ ಕ್ರಮ ವಹಿಸುವುದಾಗಿ ತಿಳಿಸಿದರು.
2. ವಾರ್ಡ್ ವ್ಯಾಪ್ತಿಯ ಗಣೇಶ್ ಉದ್ಯಾನವನದಲ್ಲಿ ಸಸಿಗಳಿಗೆ ಗೊಬ್ಬರವನ್ನು ಹಾಕಲು ಸದ್ಯಸರು, ಕ್ಷೇಮಾಭಿವೃದ್ಧಿ ಸಂಘ & ಸಾರ್ವಜನಿಕರು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಶ್ರೀ ಚಂದ್ರಶೇಖರ ತೋಟಗಾರಿಕೆ ಅಧೀಕ್ಷಕರು ರವರು ಈಗಾಗಲೇ ಕ್ರಮ ಕೈಗೊಂಡಿರುವುದಾಗಿ ಸಭೆಗೆ ತಿಳಿಸಿದರು.

(3........)

Scanned with

3. ವಾರ್ಡ್ ವ್ಯಾಪ್ತಿಯಲ್ಲಿ ಹಲವಾರು ಉದ್ಯಾನವನಗಳಲ್ಲಿ ಬೋರ್‌ವೇಲ್‌ಗಳಿಗೆ ಮೀಟರ್ ಅಳವಡಿಸಿದ್ದು, 14ನೇ ಅಡ್ಡ ರಸ್ತೆ, 22ನೇ ಮುಖ್ಯ ರಸ್ತೆ, ಸೆಕ್ಟರ್-1 ರ ಉದ್ಯಾನವನದಲ್ಲಿ ಬೋರ್‌ವೇಲ್‌ಗೆ ಮೀಟರ್ ಅಳವಡಿಸಿರುವುದಿಲ್ಲವೆಂದು ಸದ್ಯಸರು ಕ್ಷೇಮಾಭಿವೃದ್ಧಿ ಸಂಘ & ಸಾರ್ವಜನಿಕರು ಸಭೆಯಲ್ಲಿ ಆಕ್ಷೇಪಿಸಿರುತ್ತಾರೆ.
4. ವಾರ್ಡ್ ವ್ಯಾಪ್ತಿಯ ಉದ್ಯಾನವನಗಳಲ್ಲಿ ವಾಕಿಂಗ್ ಪಥನ್ನು ಸರಿಪಡಿಸುವಿಕೆ, ಅಭಿವೃದ್ಧಿಯಾಗಿರುವ ಉದ್ಯಾನವನಗಳಲ್ಲಿ ಭದ್ರತೆ ಸಿಬ್ಬಂದಿಯ ಕೊರತೆ, NEFT College ಉದ್ಯಾನವನದಲ್ಲಿ ಫೆನ್ಸಿಂಗ್ ಎತ್ತರಿಸಲು, Independence Park ಅಲ್ಲಿ ಬೆಂಚ್, ಜಿಮ್ ಉಪಕರಣಗಳನ್ನು ಅಳವಡಿಸಲು ವಾರ್ಡ್ ಸದ್ಯಸರು, ಕ್ಷೇಮಾಭಿವೃದ್ಧಿ ಸಂಘ & ಸಾರ್ವಜನಿಕರು ಸಭೆಯ ಗಮನಕ್ಕೆ ತಂದರು.

- **ಘನತ್ಯಾಜ್ಯ ನಿರ್ವಹಣೆ:-**
  1. ಹೆಚ್.ಎಸ್.ಆರ್ ಬಡಾವಣೆ ವ್ಯಾಪ್ತಿಯ ಸನ್ ಸಿಟಿ ಅಪಾರ್ಟ್‌ಮೆಂಟ್ ಒಳಗಡೆ Waste ಕಸ ವಿಂಗಡಣೆ ಸಂಸ್ಕರಣಾ ಘಟಕದಿಂದ ನೋಣಗಳು ಹೆಚ್ಚಾಗಿದ್ದು, 5ನೇ ಮತ್ತು 7ನೇ ಮುಖ್ಯ ರಸ್ತೆ, ಇಬ್ಬಲೂರು ಗ್ರಾಮದಲ್ಲಿ ವಾಸಿಸುತ್ತಿರುವ ನಿವಾಸಿಗಳು ಮತ್ತು ಸಾರ್ವಜನಿಕರಿಗೆ ಸಂಸ್ಕರಣ ಘಟಕದಿಂದ ಕೆಟ್ಟ ವಾಸನೆ ಬರುತ್ತಿದ್ದು, ಇದರಿಂದ ಮಕ್ಕಳಿಗೆ, ಹಿರಿಯ ನಾಗರೀಕರ ಆರೋಗ್ಯದ ಮೇಲೆ ದುಷ್ಪರಿಣಾಮ ಸಂಭವಿಸುವ ಸಾಧ್ಯತೆ ಇರುವುದರಿಂದ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳಲು ಇಬ್ಬಲೂರು ಗ್ರಾಮಸ್ಥರು, ಸಾರ್ವಜನಿಕರು ಸಭೆಯಲ್ಲಿ ಕೋರಿದರು. ಈ ಬಗ್ಗೆ ಸಭೆಯಲ್ಲಿ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಹಾಜರಿದ್ದ ಶ್ರೀಮತಿ ಸತ್ಯವಾಣಿ ಕಿ.ಅ.ಪ ರವರಿಗೆ ಕೊಡಲೇ ಸ್ಥಳ ಪರಿಶೀಲಿಸಲು ಸೂಚಿಸಿದರು.
  2. 9ನೇ ಮುಖ್ಯ ರಸ್ತೆ, 14ನೇ ಅಡ್ಡ ರಸ್ತೆ, ಸೆಕ್ಟರ್-6 ರ ರಸ್ತೆಯಲ್ಲಿ ಸುಮಾರು ವರ್ಷಗಳಿಂದ ಕಸಗಳನ್ನು ತೆಗೆದಿಲ್ಲವೆಂದು ಸಭೆಯಲ್ಲಿ ಸದ್ಯಸರು, ಕ್ಷೇಮಾಭಿವೃದ್ಧಿ ಸಂಘ & ಸಾರ್ವಜನಿಕರು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಸಭೆಯಲಿ ಹಾಜರಿದ್ದ ಶ್ರೀಮತಿ ಸತ್ಯವಾಣಿ ಕಿ.ಅ.ಪ ರವರು ತೆರವುಗೊಳಿಸಲು ಕ್ರಮಕ್ಕೈಗೊಳ್ಳುವುದಾಗಿ ತಿಳಿಸಿದರು.

**ಸಂಚಾರಿ ವಿಭಾಗ :-**

1. ವಾರ್ಡ್ ವ್ಯಾಪ್ತಿಯ ಅಡ್ಡ ರಸ್ತೆ & ಮುಖ್ಯ ರಸ್ತೆಗಳ ಪಾದಚಾರಿ ಮಾರ್ಗಗಳಲ್ಲಿ ತಳ್ಳುವ ಗಾಡಿಯಲ್ಲಿ ವ್ಯಾಪಾರ ನಡೆಸುತ್ತಿರುವ ಬಹುತೇಕ ತಳ್ಳುವಗಾಡಿಗಳನ್ನು ಬಿಬಿಎಂಪಿಯಿಂದ ತೆರವುಗೊಳಿಸಲಾಗಿದ್ದು, 5ನೇ ಮತ್ತು 9ನೇ ಮುಖ್ಯ ರಸ್ತೆ ಪಾದಚರಿ ಮಾರ್ಗದಲ್ಲಿ ದ್ವಿ-ಚಕ್ರ ವಾಹನಗಳನ್ನು ನಿಲ್ಲಿಸುತ್ತಿದ್ದು, ಇದರಿಂದ ಪಾದಚಾರಿ ಮಾರ್ಗದಲ್ಲಿ ಓಡಾಡಲು ಕಷ್ಟಕರವಾಗುತ್ತಿದ್ದು, ವಾಹನಗಳನ್ನು ನಿಲ್ಲಿಸದಂತೆ ನಾಮಫಲಕಗಳನ್ನು ಅಳವಡಿಸುವಂತೆ ಸದಸ್ಯರು ಕ್ಷೇಮಾಭಿವೃದ್ಧಿ ಸಂಘ ರವರು ಸಭೆಯಲ್ಲಿ ಕೋರಿರುತ್ತಾರೆ.
2. ವಾರ್ಡ್ ವ್ಯಾಪ್ತಿಯ ಮಂತ್ರಿ ಸರೋವರ ಅಪಾರ್ಟಮೆಂಟ್ (ಸರ್ವಿಸ್) ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸಿದ್ದು, ಇದರಿಂದ ಅಪಾರ್ಟಮೆಂಟ್ ನಿವಾಸಿಗಳು ಓಡಾಡಲು ತೊಂದರೆಯಾಗುತ್ತಿರುವ ಬಗ್ಗೆ ಕಮ್ಯುನಿಟಿ ಟಾಸ್ಕ್ ಫೋರ್ಸ್ ರವರು ಸಭೆಯಲ್ಲಿ ದೂರನ್ನು ಸಲ್ಲಿಸಿರುತ್ತಾರೆ.
3. ಹೆಚ್.ಎಸ್.ಆರ್. ಬಡಾವಣೆ, 17ನೇ ಅಡ್ಡ ರಸ್ತೆಯಲ್ಲಿರುವ ಕೆನರಾ ಬ್ಯಾಂಕ್ ಮತ್ತು ಎಸ್.ಬಿ.ಐ ಬ್ಯಾಂಕ್ ಹತ್ತಿರ ವಾಹನಗಳನ್ನು ಸಂಚಾರಿ ಟೋಯಿಂಗ್ ಸಿಬ್ಬಂದಿರವರು ವಾಹನಗಳನ್ನು ಟೋಯಿಂಗ್ ಮಾಡಲಾಗುತ್ತಿದ್ದು, ಬ್ಯಾಂಕ್ ಬೆಸ್ಮೆಂಟ್‌ನಲ್ಲಿ ವಾಹನಗಳನ್ನು ನಿಲ್ಲಿಸಲು ಮಾಲೀಕರಿಗೆ ಸೂಚಿಸಲು ಸದಸ್ಯರು ಸಭೆಯಲ್ಲಿ ಪ್ರಸ್ತಾಪಿಸಿದರು.
4. ಹಿಂದಿನ ಹಲವಾರು ಸಭೆಗಳಲ್ಲಿ ಚರ್ಚಿಸಿರುವಂತೆ 14ನೇ ಮುಖ್ಯ ರಸ್ತೆ, 18ನೇ ಅಡ್ಡ ರಸ್ತೆಯಲ್ಲಿ ವಾಹನಗಳನ್ನು ಓಡಾಡಲು ಅಡ್ಡಲಾಗಿ ಬ್ಯಾರಿಕೇಡ್ ಅಳವಡಿಸಿದ್ದು, ಈ ಬಗ್ಗೆ ಅನೇಕ ಬಾರಿ ದೂರನ್ನು ಸಲ್ಲಿಸಿದ್ದರು ಸಹ ಇದುವರೆಗೂ ಬ್ಯಾರಿಕೇಡ್ ತೆರವುಗೊಳಿಸಲಾಗಿರುವುದಿಲ್ಲವೆಂದು ಸದಸ್ಯರು ಆಕ್ಷೇಪಿಸಿರುತ್ತಾರೆ.

(4......)

Scanned with

- **ಬಿ.ಡಬ್ಲ್ಯೂ.ಎಸ್.ಎಸ್.ಬಿ:-**

1. ವಾರ್ಡ್ ವ್ಯಾಪ್ತಿಯ ಇಬ್ಬಲೂರು ಗ್ರಾಮದಲ್ಲಿ ಈಗಾಗಲೇ ರಸ್ತೆ ಡಾಂಬರೀಕರಣ ಮಾಡಲಾಗಿರುವ ರಸ್ತೆಯನ್ನು ಬಿಡಬ್ಲ್ಯೂಎಸ್ಎಸ್ ಇಲಾಖೆಯಿಂದ ಕಾವೇರಿ ನೀರು ಸಂಪರ್ಕಕ್ಕೆ ರಸ್ತೆ ಅಗೆಯುತ್ತಿದ್ದು, ಪುನಃ ರಸ್ತೆಯನ್ನು ಯಥಾಸ್ಥಿತಿಗೆ ತರುವಂತೆ ಇಬ್ಬಲೂರು ನಿವಾಸಿಗಳು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ.

- **ಕಾಮಗಾರಿ:-**

1. ಹೆಚ್.ಎಸ್.ಆರ್ ಬಡಾವಣೆ ಸಿ.ಪಿ.ಡಬ್ಲ್ಯೂ.ಡಿ ಕ್ವಾಟರ್ಸ್ ಹಿಂಭಾಗ 3 ಶೆಡ್ ಅಕ್ರಮವಾಗಿ ಅಳವಡಿಸಿದ್ದು, ಇದನ್ನು ತೆರವುಗೊಳಿಸಲು ಸದಸ್ಯರು, ಕ್ಷೇಮಾಭಿವೃದ್ಧಿ ಮತ್ತು ಸಾರ್ವಜನಿಕರು ಸಭೆಯಲ್ಲಿ ಪ್ರಸ್ತಾಪಿಸಿದರು.
2. ಹೆಚ್.ಎಸ್.ಆರ್ ಬಡಾವಣೆ, ಇಬ್ಬಲೂರು ಗ್ರಾಮದ 7ನೇ ಮುಖ್ಯ ರಸ್ತೆ ಸನ್‌ಸಿಟಿ ಅಪಾರ್ಟ್‌ಮೆಂಟ್ ರಾಜಕಾಲುವೆ ಮೇಲೆ ಕಾಂಪೌಂಡ್ ಗೋಡೆ ನಿರ್ಮಿಸಿ ಒತ್ತುವರಿ ಮಾಡಿಕೊಂಡಿದ್ದು, ಮಳೆ ಬಂದಾಗ ಬೃಹತ್ ಮಳೆ ನೀರುಗಾಲುವೆಯಿಂದ ಸನ್‌ಸಿಟಿ ಅಪಾರ್ಟ್‌ಮೆಂಟ್ ಒಳಗಡೆ ನೀರು ನುಗ್ಗುತ್ತಿದ್ದು ಮತ್ತು ಮಳೆ ನೀರು ನಿಂತು ರಿವರ್ಸ್ (ಹಿಂದಕ್ಕೆ) ಹರಿಯುತ್ತಿದ್ದು, ಇದನ್ನು ಪರಿಶೀಲಿಸಿ ಕ್ರಮ ವಹಿಸಲು ಸಭೆಯಲ್ಲಿ ಪ್ರಸ್ತಾಪಿಸಿದರು.
3. ಸರ್ವೆ ಸಂಖ್ಯೆ: 34ರಲ್ಲಿ ಕಟ್ಟಡ ನಿರ್ಮಿಸಲಾಗುತ್ತಿದ್ದು, ಕಾರ್ಮಿಕರಿಗೆ ರಸ್ತೆ & ಪಾದಚಾರಿ ಮಾರ್ಗದಲ್ಲಿ ತಾತ್ಕಾಲಿಕವಾಗಿ ಶೆಡ್‌ನ್ನು ನಿರ್ಮಿಸಲಾಗಿದ್ದು, ಸಾರ್ವಜನಿಕರಿಗೆ ಮತ್ತು ಸ್ಥಳೀಯರಿಗೆ ಓಡಾಡಲು ಕಷ್ಟಕರವಾಗುತ್ತಿರುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದರು.

- **ಬೆಸ್ಕಾಂ:-**

1. ವಾರ್ಡ್ ವ್ಯಾಪ್ತಿಯಲ್ಲಿ ಬೆಸ್ಕಾಂ ಇಲಾಖೆಯಿಂದ ರಸ್ತೆ ಅಗೆದಿದ್ದು, ಇದುವರೆಗೂ ಡಾಂಬರೀಕರಣ ಮಾಡಿರುವುದಿಲ್ಲವೆಂದು ಸಭೆಯಲ್ಲಿ ಸದಸ್ಯರು ಆಕ್ಷೇಪಿಸಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಶ್ರೀ ಪ್ರಕಾಶ ಮತ್ತು ಸಹಾಯಕ ಅಭಿಯಂತರರು, ಶ್ರೀಯತೀಶ್ ರವರು ಬಿಬಿಎಂಪಿ ಇಲಾಖೆಯಿಂದ ಅನುಮತಿಗಾಗಿ ಅರ್ಜಿ ಸಲ್ಲಿಸಿ, ರಸ್ತೆ ಅಗೆದ ಶುಲ್ಕವನ್ನು ಪಾವತಿಸಿ, ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದು ಸಭೆಯಲ್ಲಿ ತಿಳಿಸಿರುತ್ತಾರೆ. ಹಾಗೂ ಈ ಬಗ್ಗ ಸಹಾಯಕ ಅಭಿಯಂತರರು, ಬಿಬಿಎಂಪಿ ರವರು ರಸ್ತೆಯನ್ನು ಯಾವ ಇಲಾಖೆಯಿಂದ ಅಗೆಯಲಾಗಿತ್ತದೆಯೋ ಅದೇ ಇಲಾಖೆಯವರು ರಸ್ತೆಯನ್ನು ಯಥಾಸ್ಥಿಗೆ (Motorable Condition) ತರಬೇಕಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿರುತ್ತಾರೆ. ಅಧ್ಯಕ್ಷರು/ನೋಡಲ್ ಅಧಿಕಾರಿ ರವರು ಬಿಬಿಎಂಪಿ, ಬೆಸ್ಕಾಂ ಮತ್ತು ಬಿಡಬ್ಲ್ಯೂಎಸ್‌ಎಸ್‌ಬಿ ರವರು ಸಮನ್ವಯದಿಂದ ಸಹಕರಿಸಲು ಸಭೆಯಲ್ಲಿ ಸೂಚಿಸಿದರು.
2. ವಾರ್ಡ್ ವ್ಯಾಪ್ತಿಯಲ್ಲಿ ಬೆಸ್ಕಾಂ ಇಲಾಖೆ ರವರು ಪಾದಚಾರಿ ಮಾರ್ಗದ ಮೇಲೆ ಟ್ರಾನ್ಸ್‌ಫಾರ್ಮರ್ ಮತ್ತು ಪ್ಯಾನಲ್ ಬೋರ್ಡ್ ಅಳವಡಿಸಿದ್ದು, ಇದರಿಂದ ಸಾರ್ವಜನಿಕರಿಗೆ ಪಾದಚಾರಿ ಮಾರ್ಗದ ಮೇಲೆ ಓಡಾಡಲು ಕಷ್ಟಕರವಾಗುತ್ತಿದ್ದು, ಕೂಡಲೇ ಸ್ಥಳಾಂತರಗೊಳಿಸಬೇಕೆಂದು ಸಭೆಯಲ್ಲಿ ಸದಸ್ಯರು, ಕ್ಷೇಮಾಭಿವೃದ್ಧಿ ಸಂಘ ಮತ್ತು ಸಾರ್ವಜನಿಕರು ಪ್ರಸ್ತಾಪಿಸಿದರು.
3. ಹಿಂದಿನ ಹಲವಾರು ಸಭೆಗಳಲ್ಲಿ ಚರ್ಚಿಸಿರುವಂತೆ ಹೆಚ್.ಎಸ್.ಆರ್ ಬಡಾವಣೆ 3ನೇ ಸೆಕ್ಟರ್, ನಿವೇಶನ ಸಂಖ್ಯೆ: 3345ರ ಕಟ್ಟಡದಲ್ಲಿ ಅನಧಿಕೃತವಾಗಿ ಮೊಬೈಲ್ ಟವರ್‌ನ್ನು ಅಳವಡಿಸಿದ್ದು, ತೆರವುಗೊಳಿಸಲಾಗಿದೆ ಎಂದು ಸಭೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಅಭಿಯಂತರರು, ಬೆಸ್ಕಾಂ ರವರು ತಿಳಿಸಿದರು.

(5.....)

Scanned with

ಅಂತಿಮವಾಗಿ ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ರವರು, ವಾರ್ಡ್ ನಂ. 174 ಹಾಗೂ ಜಂಟಿ ಆಯುಕ್ತರು, (ಮಹಾದೇವಪುರ ವಲಯ) ರವರು ಸಭೆಯಲ್ಲಿ ಚರ್ಚಿಸಲಾದ ಎಲ್ಲಾ ವಿಷಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿ ರವರು ತುರ್ತು ಕ್ರಮವಹಿಸಲು ಸೂಚಿಸಿದರು ಹಾಗೂ ಸಾರ್ವಜನಿಕರು ನೀಡಿರುವ ದೂರಿನ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ, ವಾರ್ಡ್ ನಂ.174ರ
ಸಹಾಯಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ
ಜಂಟಿ ಆಯುಕ್ತರು, ಮಹಾದೇವಪುರ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1) ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ
2) ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ
4) ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6) ವಾರ್ಡ್ ಸಮಿತಿಯ ಸದಸ್ಯರ/ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
7) ಕಛೇರಿ ಪ್ರತಿ.

Scanned with